ಬಾಗಿಲ ಬಳಿ ಬಿದ್ದಿದ್ದ ಶವದ ಕಡೆ ಒಮ್ಮೆ ನೋಡಿ ಇನ್‌ಸ್ಪೆಕ್ಟರ್ ಭೂಷಣ್ ಕ್ರೈಂ ಸೀನ್‌ಗೆ ಆಗಲೇ ಬಂದಿದ್ದ ತನ್ನ ಡೆಪ್ಯುಟಿ ಎ.ಎಸ್.ಐ. ಅಮಿತಾ ಕಡೆ ನೋಡಿದ.

"ಸರ್, ಹೆಸರು ರಾಧಾಕೃಷ್ಣ ಬಾಳಿಗಾ ಅಂತ... ಷೇರ್ ಬ್ರೋಕರ್..."

ಅವಳ ಮಾತುಗಳು ಕೇಳಲಿಲ್ಲವೇನೋ ಎಂಬಂತೆ ಇನ್‌ಸ್ಪೆಕ್ಟರ್ ಭೂಷಣ್ ಶವವನ್ನೇ ದಿಟ್ಟಿಸಿ ನೋಡತೊಡಗಿದ.

ಸುಮಾರು ಐವತ್ತೈದು ವಯಸ್ಸಿನ ವ್ಯಕ್ತಿ. ಬದುಕಿದ್ದಾಗ ಹ್ಯಾಂಡ್‌ಸಂ ಆಗಿರಬಹುದಾದ ಮೈಕಟ್ಟು, ಗಂಭೀರ ಮುಖ, ಅಲ್ಲಲ್ಲಿ ನೆರೆತಿದ್ದ ಕೂದಲು, ಪುಟ್ಟ ಫ್ರೆಂಚ್ ಗಡ್ಡ, ಹೊಟ್ಟೆಯ ಭಾಗದಲ್ಲಿ ತೂರಿದ್ದ ಗುಂಡುಗಳು... ಒಂದು ಹೊಟ್ಟೆಯ ಮೇಲ್ಭಾಗ ಸೀಳಿದ್ದರೆ, ಮತ್ತೆರಡು ಲಿವರ್ ಮತ್ತು ಪ್ಯಾಂಕ್ರಿಯಾಸನ್ನು ಸೀಳಿಕೊಂಡು ಹೋಗಿದ್ದವು. ವಿಪರೀತ ರಕ್ತಸ್ರಾವದಿಂದ ಸತ್ತಿರುವುದು ಮೇಲ್ನೋಟಕ್ಕೆ ಕಾಣುತ್ತಿತ್ತು.

ಹಾಕಿದ್ದ ಬಟ್ಟೆ, ಕೈಗೆ ಕಟ್ಟಿದ್ದ ಬೆಲೆಬಾಳುವ ವಾಚ್, ವಜ್ರದ ಉಂಗುರ, ಬ್ರೆಸ್ಲೆಟ್, ಕುತ್ತಿಗೆಗೆ ಹಾಕಿದ್ದ ಚೈನ್ ಅವನೊಬ್ಬ ಶ್ರೀಮಂತ ಎನ್ನುವುದನ್ನು ಹೇಳುವುದಲ್ಲದೆ, ಅದನ್ನು ಹೇಗೆ ತೋರಿಸಿಕೊಳ್ಳಬೇಕು ಎನ್ನುವುದನ್ನು ಅರಿತಿದ್ದಾನೆ ಎಂದೂ ತಿಳಿಸುತ್ತಿದ್ದವು.

"ಸರ್, ಬೆಳಗ್ಗೆ ಸುಮಾರು ಹನ್ನೊಂದರ ಹೊತ್ತಿಗೆ ಇವರ ಹೆಂಡತಿ ನಂದಿನಿ ಸ್ಟೇಶನ್‌ಗೆ ಬಂದು ತಾನೇ ಗಂಡನನ್ನು ಕೊಲೆ ಮಾಡಿದ್ದೇನೆ ಎಂದು ತಪ್ಪೊಪ್ಪಿಕೊಂಡು ಮರ್ಡರ್ ವೆಪನ್ ಕೂಡಾ ಸರೆಂಡರ್ ಮಾಡಿದ್ದರು. ನೀವು ಕೋರ್ಟ್‌ನಲ್ಲಿ ಇದ್ದಿದ್ದರಿಂದ ತಕ್ಷಣ ಮಾಹಿತಿ ಕೊಡಲಿಕ್ಕೆ ಆಗಲಿಲ್ಲ..."

ಮೂಲೆಯಲ್ಲಿ ಸುಮಾರು ಮೂವತ್ತೈದು

